ಶ್ರೀ ಕೆ. ಎಸ್. ಕಾಳಮರಿಗೌಡ.—ಇನ್ನು ಎಷ್ಟು ದಿವಸದಲ್ಲಿ ಈ ಪರಿಹಾರವನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ಒಂದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಇದು ಜ್ವಲಂತ ಸಮಸ್ಯೆ, ದುರ್ದೈವ. ನಮ್ಮ ಈ ಆಕ್ಟ್‌ನ್ನು ಸಾಧ್ಯವಾದರೆ ಅಮೆಂಡ್ ಮಾಡಬೇಕಾಗುತ್ತದೆ. ಯಾರು ಜಮೀನು ಕಳೆದುಕೊಳ್ಳುತ್ತಾರೆ, ಆ ಜಮೀನು ಮಾರ್ಕೆಟ್ ಬೆಲೆ 20–25 ಸಾವಿರ ರೂಪಾಯಿ ಇದ್ದರೂ, 2–3 ಸಾವಿರ ರೂಪಾಯಿ ಕೊಡತಕ್ಕದ್ದು ಇದೆ. ಇದರ ಬಗ್ಗೆ ಮಾನವೀಯ ದೃಷ್ಟಿಯಿಂದ ನೋಡ ಬೇಕಾಗುತ್ತದೆ. ಅವಶ್ಯಬಿದ್ದರೆ ಆಕ್ಟ್‌ನ್ನು ಬದಲಾವಣೆ ಮಾಡಿ, ಅಕ್ಚೆರ್ ಮಾಡತಕ್ಕದ್ದರಲ್ಲಿ ದೋಷ ಇದ್ದರೆ ಅದನ್ನು ಸರಿಪಡಿಸಿ, ಕ್ರಮ ಜರುಗಿಸುವ ಪ್ರಯತ್ನದಲ್ಲಿದ್ದೇವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಸಾಧ್ಯವಾದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ : ಸಾಗುವಳಿಗಾಗಿ ಅರಣ್ಯ ಜಮೀನನ್ನು ಹಂಚುವುದು.

ಪ್ರ. 201 (152) ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು):— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;

(ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಭೂಹೀನರ ಸ್ವಾಧೀನದಲ್ಲಿರುವ ಸಾಗುವಳಿಗೆ ಯೋಗ್ಯವಾದ ಅರಣ್ಯ ಭೂಮಿಯನ್ನು ಹಾಗೂ ಸರ್ಕಾರಿ ಭೂಮಿಯನ್ನು ಅವರಿಗೇ ಹಂಚಿಕೊಡದಿರಲು ಕಾರಣಗಳೇನು...

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಮೊಳಕಾಲ್ಮೂರು ತಾಲ್ಲೂಕಿನ ದಡಗೂರು ಮತ್ತು ದೇವಸಮುದ್ರ ಗ್ರಾಮಗಳಲ್ಲಿನ 'ಸಿ' ಮತ್ತು 'ಡಿ' ವರ್ಗದ ಭೂಮಿಗಳನ್ನು ಭೂರಹಿತ ಜನರು ಅತಿಕ್ರಮಿಸಿಕೊಂಡಿರುತ್ತಾರೆ. ಈ ಅತಿಕ್ರಮಿತ ಭೂಮಿಯನ್ನು ಯಥಾವತ್ತಾಗಿ ಕಂದಾಯ ಇಲಾಖೆ ಅರಣ್ಯ ಇಲಾಖೆಗೆ ವಹಿಸಿಕೊಟ್ಟಿರುತ್ತೆ. ಅತಿಕ್ರಮಿತರು ಗಳಿಗೆ ಭೂಮಿಯನ್ನು ಕ್ರಮಬದ್ಧಗೊಳಿಸಿಕೊಡುವ ವಿಷಯವನ್ನು ಹಾಲಿ ಇರುವ ನಿಯಮಾವಳಿಗ ಪ್ರಕಾರ ಪರಿಶೀಲಿಸಲಾಗುವುದು.

ಶ್ರೀ ಎನ್. ಜಿ. ನಾಯಕ್.—ಇದು ಮೊದಲು ಕಂದಾಯ ಇಲಾಖೆಯಲ್ಲಿದ್ದಂಥ ಭೂಮಿ, ಈಗ ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ. ಇವರು ಇನ್ನೂ ಪಟ್ಟಾ ಏತಕ್ಕೆ ಕೊಟ್ಟಿಲ್ಲ, ಇದರ ಬಗ್ಗೆ ಅರಣ್ಯ ಮಂತ್ರಿ ಗಳು ತಿಳಿಸಬೇಕು.

ಅಧ್ಯಕ್ಷರು.—ಪಟ್ಟಾ ಅವರು ಕೊಡುವುದಿಲ್ಲ.

ಶ್ರೀ ಎನ್. ಜಿ. ನಾಯಕ್.—ಮೊದಲಿಂದಲೂ ಅವರ ಸ್ವಾಧೀನದಲ್ಲಿಟ್ಟುಕೊಂಡಿದ್ದರೂ ಅವರಿಗೆ ಪಟ್ಟಾ ಕೊಟ್ಟಿಲ್ಲ. ಅವರಿಗೆ ಪಟ್ಟಾ ಏತಕ್ಕೆ ಕೊಟ್ಟಿಲ್ಲ, ಮಾನ್ಯ ಅರಣ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಎ. ಜೀವಿಜಯ.—ಮೊಳಕಾಲ್ಮೂರು ತಾಲ್ಲೂಕಿನ ದಡಗೂರು ಗ್ರಾಮದಲ್ಲಿ 34 ಜನ ಮತ್ತು ದೇವಸಮುದ್ರ ಗ್ರಾಮದಲ್ಲಿ 48 ಜನ ಅತಿಕ್ರಮ ಮಾಡಿದ್ದಾರೆ. ಸಿ ಮತ್ತು ಡಿ ನಲ್ಲಿ ನಾಲ್ಕು ವರ್ಗದ ಜಮೀನು ಮಾಡಿದ್ದಾರೆ. ಸಿ ಮತ್ತು ಡಿ ನಲ್ಲಿ ವ್ಯವಸಾಯ ಮಾಡಲಿಕ್ಕೆ ಆಗುವುದಿಲ್ಲ. ಅಲ್ಲಿ ಮರಗಳನ್ನು ಬೆಳಸಬಹುದು. ಇದು ಕಂದಾಯ ಇಲಾಖೆಯವರು ವರ್ಗಾವಣೆ ಮಾಡುವಾಗ ಹೇಗೆ ಇತ್ತೋ, ಎಲ್ಲಿ ಇತ್ತೋ ಹಾಗೆಯೇ ಇದೆ. ಆ ಆಧಾರದ ಮೇಲೆ ಅರಣ್ಯ ಇಲಾಖೆಗೆ ಆ ಜಮೀನು ವಹಿಸಿ ಕೊಟ್ಟಿದ್ದಾರೆ. 1978ನೇ ಇಸವಿಯಲ್ಲಿ ಒಂದು ಸಮಿತಿ ರಚನೆಯಾಗಿದೆ. ಈಗ ಸಿ ಮತ್ತು ಡಿ ವರ್ಗದ ಭೂಮಿಗಳನ್ನು ಯಾರು ಅತಿಕ್ರಮ ಮಾಡಿದ್ದಾರೆ ಅವರಿಗೆ ಮಂಜೂರು ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳು ತ್ತೇವೆ.

ಶ್ರೀ ಎನ್. ಜಿ. ನಾಯಕ್.—ಅಲ್ಲಿ ಬಹಳ ಹಿಂದುಳಿದ ವರ್ಗದವರು ಇದ್ದಾರೆ, ಬಡವರು ಇದ್ದಾರೆ. ಅಲ್ಲಿ ಜಮೀನು ಮಾಡುತ್ತಿದ್ದರೂ ಅವರಿಗೆ ಇನ್ನೂ ಪಟ್ಟಾ ಕೊಟ್ಟಿಲ್ಲ. ಆ ಜಮೀನಿನಲ್ಲಿ ಯಾವುದೇ ಗಿಡ ಮರಗಳು ಇಲ್ಲ. ಆ ಜಮೀನನ್ನು ಫಾರೆಸ್ಟ್ ಇಲಾಖೆಯವರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಬಿ. ಎ. ಜೀವಿಜಯ.—ಅತಿ ಶೀಘ್ರವಾಗಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ: ಕೋಲಾರ ಜಿಲ್ಲೆಯಲ್ಲಿ ಭೂಹೀನ ಜನರಿಗೆ ಅರಣ್ಯ ಜಮೀನನ್ನು ಹಂಚುವುದು.

ಪ್ರ. 202 (148) ಶ್ರೀ ಎ. ವಿ. ಅಪ್ಪಸ್ವಾಮಿರೆಡ್ಡಿ (ಬಾಗೇಪಲ್ಲಿ):— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

(ಅ) ಕೋಲಾರ ಜಿಲ್ಲೆಯಲ್ಲಿ ಭೂಹೀನರು ಅರಣ್ಯ ಪ್ರದೇಶವನ್ನು ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಬಡ ರೈತರುಗಳು ಈಗಾಗಲೇ ಸರ್ಕಾರಕ್ಕೆ ಹಲವಾರು ಬಾರಿ ತಮ್ಮ ಸಾಗುವಳಿ ಜಮೀನು ಗಳನ್ನು ಸಕ್ರಮಗೊಳಿಸಿ ಹಕ್ಕು ಪತ್ರ ನೀಡಬೇಕೆಂದು ಸರ್ಕಾರದವರಿಗೆ ಮೊರೆಯಿಟ್ಟಿರುವುದು ಕೂಡ ಸರ್ಕಾರ ದಲ್ಲಿ ಮಾಹಿತಿಯಿದೆಯೇ;

(ಇ) ಇವರನ್ನು ಅವರು ಸಾಗುವಳಿ ಮಾಡುತ್ತಿರುವ ಭೂಮಿಯಿಂದ ಹೊರದೂಡುವುದಿಲ್ಲವೆಂದು ಸರ್ಕಾರದವರು ಭರವಸೆ ನೀಡುವರೇ;

(ಈ) ಕೇಂದ್ರ ಸರ್ಕಾರದಿಂದ ಅವಶ್ಯಕವಾದ ಅನುಮತಿ ಪಡೆದು ಈ ಭೂಹೀನರಿಗೆ ಅವರ ಜಮೀನುಗಳ ಬಗ್ಗೆ ಸಾಗುವಳಿ ಪತ್ರಗಳನ್ನು ನೀಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಹೌದು.

(ಆ) ಹೌದು.

(ಇ) ಅರಣ್ಯ ಸಂರಕ್ಷಣಾ ಕಾಯಿದೆ 1980ರ ಪ್ರಕಾರ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅನುಮತಿ ಯಿಲ್ಲದೆ ಅರಣ್ಯ ಭೂಮಿಯನ್ನು ಅರಣ್ಯೇತರ ಕಾರ್ಯಗಳಿಗೆ ಮಂಜೂರು ಮಾಡಲಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಭರವಸೆಯನ್ನು ಕೊಡಲಾಗುವುದಿಲ್ಲ.

(ಈ) ಅರ್ಹತೆಯುಳ್ಳ ಪ್ರತಿಯೊಂದು ಅತಿಕ್ರಮಣ ಪ್ರಕರಣವನ್ನು ಕೇಂದ್ರ ಸರ್ಕಾರದ ಅನುಮತಿ ಗೋಸ್ಕರ ಸಂಬಂಧಪಟ್ಟ ದಾಖಲೆಪತ್ರಗಳನ್ನು ತಯಾರಿಸಲಾಗುತ್ತದೆ.

ಶ್ರೀ ಎ. ವಿ. ಅಪ್ಪಸ್ವಾಮಿ ರೆಡ್ಡಿ.—ಈಗ ಅರಣ್ಯ ಪ್ರದೇಶವನ್ನು ಸಾಗುವಳಿ ಮಾಡುತ್ತಿರುವವರಿಗೆ ಕೊಡಬೇಕೆಂಬ ಅನುಮತಿ ಕೇಂದ್ರ ಸರ್ಕಾರದಿಂದ ಬಂದಿದೆಯೇ? ಮಾನ್ಯ ಅರಣ್ಯ ಮಂತ್ರಿಗಳು ಇದರ ಬಗ್ಗೆ ತಿಳಿಸಬೇಕು.

ಶ್ರೀ ಬಿ. ಎ. ಜೀವಿಜಯ.—1978ನೇ ಇಸವಿಯಲ್ಲಿ ಆಂದಿನ ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿತ್ತು. ಆಂದಿನ ಸರ್ಕಾರ ರಚನೆ ಮಾಡಿದಂಥ ಸಮಿತಿ 1980ನೇ ಇಸವಿಯವರೆಗೆ. ಈ ರಾಜ್ಯದಲ್ಲಿ ಎಷ್ಟು ಅತಿಕ್ರಮ ಭೂಮಿ ಸಾಗುವಳಿ ಮಾಡಿದ್ದಾರೆ ಎಂಬ ಬಗ್ಗೆ ಅಂಕಿ ಅಂಶ ಒಪ್ಪಿಸಬೇಕಾಗಿತ್ತು. 1980ನೇ ಇಸವಿಯಲ್ಲಿ ಕೇಂದ್ರ ಸರ್ಕಾರದ ಕಾನೂನು ಬಂದಿದೆ. 19 ಸಾವಿರ ಎಕರೆ ಹೆಕ್ಟೇರ್ ಭೂಮಿಯನ್ನು ಅತಿಕ್ರಮ ಮಾಡಿದ್ದಾರೆ ಎಂಬ ವರದಿ ಸರ್ಕಾರದ ಗಮನಕ್ಕೆ ಬಂದಿದೆ. ಕೋಲಾರದಲ್ಲಿ 396 ಜನರು ಹೆಚ್ಚು ಕಡಿಮೆ 397 ಹೆಕ್ಟೇರ್ ಪ್ರದೇಶ ಅತಿಕ್ರಮ ಮಾಡಿದ್ದಾರೆ. ಇವರೆಲ್ಲರೂ ಭೂರಹಿತರು. ಸಿ ಅಂಡ್ ಡಿ. ಕ್ಲಾಸ್ ಲ್ಯಾಂಡ್ ಆದರೆ ಕೊಡಬಹುದು. ರಿಸರ್ವ್ ಫಾರೆಸ್ಟ್ ಆದರೆ ಕೊಡಲಿಕ್ಕೆ ಬರುವುದಿಲ್ಲ.